ಶ್ರೀ ಡಿ. ಆರ್. ಕರಿಗೌಡ.—ಇನ್ನೂ ಹೆಚ್ಚು ತರಿಸಿದರೆ ವ್ಯವಸಾಯಕ್ಕೂ ಬಹಳ ಅನುಕೂಲವಾಗುತ್ತದೆ. ಅದನ್ನು ತರಿಸಿದರೆ ಸಾಕಾಗುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

Mr. SPEAKER.—Sri Siddappa had put that question and it was answered. The Government stated that it would be considered.

ಶ್ರೀ ಯು. ಎಂ. ಮಾದಪ್ಪ.—ನಂಸ್ಥಾನದಲ್ಲಿ ಗ್ರಾಮಾಂತರಗಳಲ್ಲಿ ಅನೇಕ ಕಡೆ ಉಪಯೋಗಿಸಲು ಸಾಧ್ಯವಿಲ್ಲದೇ ಇರುವುದು ಎಷ್ಟಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅನೇಕವಾಗಿ ಉಪಯೋಗಿಸುತ್ತಿದ್ದಾರೆ. ಬೋರ್‌ವೆಲ್‌ಗಳಿಗೆ ಬಹಳ ಡಿಮ್ಯಾಂಡ್ ಇದೆ.

ಶ್ರೀ ಯು. ಎಂ. ಮಾದಪ್ಪ.—ಈಗ ಅನೇಕ ವರ್ಷಗಳ ಹಿಂದೆ ಬೋರ್‌ವೆಲ್ ತೆಗೆದು ಉಪಯೋಗ ವಿಲ್ಲದೇಯಿರುವುದು ತಮಗೆ ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಚಾಮರಾಜನಗರ ತಾಲ್ಲೂಕಿನಲ್ಲಿ ಹತ್ತು ಹನ್ನೆರಡು ಬೋರ್‌ವೆಲ್‌ಗಳು ಉಪಯೋಗವಿಲ್ಲದೇಯಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಯು. ಎಂ. ಮಾದಪ್ಪ.—ಹಾಗಿದ್ದರೆ ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಅದು ಊಹಾ ಪ್ರಶ್ನೆಯಾಯಿತು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬೋರ್‌ವೆಲ್‌ಗಳನ್ನು ಒಂದೇ ಡಿಸ್ಟ್ರಿಕ್ಟಿಗೆ ಕೊಟ್ಟಿದ್ದೀರೋ ಅಥವಾ ಎಲ್ಲಾ ಡಿಸ್ಟ್ರಿಕ್ಟಿಗೂ ಕೊಟ್ಟಿದ್ದೀರೊ ?

ಅಧ್ಯಕ್ಷರು.—ಅಲ್ಲೇ ಉತ್ತರದಲ್ಲೇ ತಿಳಿಸಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಸ್ವಾಮಿ, ಎಲ ಹಂಕದಲ್ಲಿ ಎರಡು ವರ್ಷದ ಹಿಂದೆ ಬಾವಿ ತೆಗೆದು ಪೂರ್ತಿ ಮಾಡದೆ ಹಾಗೆಯೇ ಇದೆಯೆಂಬುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನೀರು ಬರಲಿಲ್ಲವಾದುದರಿಂದ ಆಳವಾಗಿ ತೆಗೆಯಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಈ ಬೋರ್‌ವೆಲ್ ಯಂತ್ರಗಳು ಕೆಟ್ಟುಹೋದರೆ ಅವುಗಳನ್ನು ಸರಿಪಡಿಸಲು ತಕ್ಕ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದೇವೆ.

Diverting the water of Gyaraghattada halla in Tiptur Taluk.

Q.—633. Sri T. G. THIMMEGOWDA (Tiptur).—

Will the Government be pleased to state:—

(*a*) whether the estimate prepared in 1947 for diverting the water of Gyarahghattadahalla to Honnavalli, Hirekere, Honnavalli Hobli in Tiptur Taluk has been sanctioned;

(*b*) if not, the reason for not sanctioning it?

A.—Sri KADIDAL MANJPPA (Minister for Revenue and Public Works).—

(*a*) No.

(*b*) The technical details are under verification and scrutiny.

ಶ್ರೀ ಟಿ. ಜಿ. ತಿಮ್ಮೇಗೌಡ.—ಅಂದಾಜು ತಯಾರಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ತಯಾರಾಗಿದೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಎಷ್ಟಕ್ಕೆ?

ಶ್ರೀ ಕಡಿದಾಳ್ ಮಂಜಪ್ಪ.—37 ಸಾವಿರ ರೂಪಾಯಿಗಳಿಗೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಅಂದಾಜನ್ನು ಜಾಗ್ರತೆ ಮಂಜೂರುಮಾಡಿ ಕೆಲಸವನ್ನು ಕೈಕೊಳ್ಳುವಂತೆ ಮಾಡುವಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಕೆಲಸವನ್ನು ಬೇಗ ಕೈಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೈಕೊಳ್ಳಲಾಗುತ್ತದೆ.

Travelling Allowance and Duty Allowance drawn by Ministers.

Q.—39. Sri B. NARAYANASWAMY (Mysore City South).—

Will the Government be pleased to state:—

(*a*) the dates on which the Chief Minister and other Ministers have toured the Districts in the State from 1st April 1952 to 1st February 1953 (a statement, monthwar, noting the date, the number of days toured, the Taluks visited and total mileage be furnished);

(*b*) the Travelling Allowance and Duty Allowance drawn by each Minister from 1st April 1952 to 1st February 1953?

A.—Sri A. G. RAMACHANDRA RAO (Minister for Law and Education) [on behalf of SRI K. HANUMANTHAIYA (Chief Minister)].—

(*a*) Statement appended below.

(*b*) *Vide* reply to Question No. 76 answered on 22nd March 1953.